ಈ ಪ್ರಶ್ನೆ ಪುಸ್ತಿಕೆಯಲ್ಲಿ ಸಾಮಾನ್ಯ ಕನ್ನಡ (ವಿಷಯ ಸಂಕೇತ : 414) ಹಾಗೂ ಸಾಮಾನ್ಯ ಇಂಗ್ಲೀಷ್ (ವಿಷಯ ಸಂಕೇತ : 415) ಎಂಬ ಎರಡು ವಿಷಯದ ಪ್ರಶ್ನೆ ಪತ್ರಿಕೆಗಳಿವೆ. ಅಭ್ಯರ್ಥಿಗಳು ಇವುಗಳಲ್ಲಿ ಯಾವುದಾದರೂ ಒಂದನ್ನು ಮಾತ್ರ ಆಯ್ಕೆ ಮಾಡಿ ಉತ್ತರಿಸಬೇಕು. ಅಭ್ಯರ್ಥಿಯು ತಾನು ಆಯ್ಕೆ ಮಾಡಿಕೊಂಡು ಉತ್ತರಿಸಬೇಕಾಗಿರುವ ವಿಷಯದ **(ಸಾಮಾನ್ಯ ಕನ್ನಡ ಅಥವಾ ಸಾಮಾನ್ಯ ಇಂಗ್ಲೀಷ್)** ಮುಂದಿನ ವೃತ್ತವನ್ನು ಸ್ಪಷ್ಟವಾಗಿ ಎನ್‌ಕೋಡ್ ಮಾಡತಕ್ಕದ್ದು. ಒಂದು ವೇಳೆ ಅಭ್ಯರ್ಥಿಯು ಈ ರೀತಿ ಮಾಡಲು ತಪ್ಪಿದ್ದಲ್ಲಿ ಒ.ಎಂ.ಆರ್. ಹಾಳೆಯನ್ನು ಅಸಿಂಧುಗೊಳಿಸಲಾಗುವುದು.

**ಈ ಪ್ರಶ್ನೆಪುಸ್ತಕವನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು.**

**ಪ್ರಶ್ನೆಪತ್ರಿಕೆ ವರ್ಷನ್ ಕೋಡ್**

**D**

**ವಿಷಯ ಸಂಕೇತ : 414**

# ಸಾಮಾನ್ಯ ಕನ್ನಡ (ಪತ್ರಿಕೆ–II)

**ಪ್ರಶ್ನೆಪುಸ್ತಿಕೆಯ ಸಂಖ್ಯೆ**

**ಗರಿಷ್ಠ ಸಮಯ : 1 ½ ಗಂಟೆಗಳು** | **ಗರಿಷ್ಠ ಅಂಕಗಳು : 100**

## ಸೂಚನೆಗಳು

1. ಪರೀಕ್ಷೆ ಪ್ರಾರಂಭವಾದ ಕೂಡಲೇ ನಿಮ್ಮ ಪ್ರಶ್ನೆಪತ್ರಿಕೆಯಲ್ಲಿ ಮುದ್ರಿತವಾಗದ ಅಥವಾ ಹರಿದಿರುವ ಅಥವಾ ಬಿಟ್ಟು ಹೋಗಿರುವ ಪುಟಗಳು ಅಥವಾ ಪ್ರಶ್ನೆಗಳು ಇತ್ಯಾದಿಗಳು ಕಂಡು ಬಂದಲ್ಲಿ ನಿಮ್ಮ ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಅದೇ ಶ್ರೇಣಿಯ ಪೂರ್ಣ ಪ್ರಶ್ನೆಪತ್ರಿಕೆಯೊಂದಿಗೆ ಬದಲಾಯಿಸಿಕೊಳ್ಳತಕ್ಕದ್ದು. ಒಂದು ವೇಳೆ ಅಭ್ಯರ್ಥಿಯು ಪ್ರಶ್ನೆಪತ್ರಿಕೆಯಲ್ಲಿನ ಪುಟಗಳನ್ನು ಸರಿಯಾಗಿ ಪರಿಶೀಲಿಸದೇ ದೋಷಪೂರಿತ ಪ್ರಶ್ನೆಪತ್ರಿಕೆಯನ್ನೇ ಉಪಯೋಗಿಸಿದಲ್ಲಿ ಇದಕ್ಕೆ ಅಭ್ಯರ್ಥಿಯೇ ಹೊಣೆಗಾರರಾಗಿರುತ್ತಾರೆ.
2. OMR ಉತ್ತರ ಹಾಳೆಯಲ್ಲಿ ಮತ್ತು ಪ್ರವೇಶ ಪತ್ರದಲ್ಲಿ ನೀಡಿರುವ ಸೂಚನೆಗಳನ್ನು ಓದಿಕೊಳ್ಳತಕ್ಕದ್ದು. ಯಾವುದೇ ಸೂಚನೆಗಳನ್ನು ಉಲ್ಲಂಘಿಸಿದಲ್ಲಿ ಆಯೋಗವು ತೆಗೆದುಕೊಳ್ಳುವ ಶಿಸ್ತು ಕ್ರಮಕ್ಕೆ ಒಳಗಾಗಬೇಕಾಗುತ್ತದೆ.
3. **ಅಭ್ಯರ್ಥಿಯು ಪ್ರಶ್ನೆಪತ್ರಿಕೆಯ ಶ್ರೇಣಿಯು ತಮ್ಮ ಒ.ಎಂ.ಆರ್. ಹಾಳೆಯಲ್ಲಿ ಮುದ್ರಿತವಾಗಿರುವ ಅದೇ ಪ್ರಶ್ನೆಪತ್ರಿಕೆಯ ಶ್ರೇಣಿಯಾಗಿರುವುದೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ವ್ಯತ್ಯಾಸಗಳು ಕಂಡು ಬಂದಲ್ಲಿ, ಸಂವೀಕ್ಷಕರ ಗಮನಕ್ಕೆ ತರುವುದು ಮತ್ತು ತಮ್ಮ ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಶ್ರೇಣಿಯ ಪ್ರಶ್ನೆಪತ್ರಿಕೆಯನ್ನೇ ಪಡೆಯತಕ್ಕದ್ದು.**
4. ಎಲ್ಲಾ ಪ್ರಶ್ನೆಗಳಿಗೂ ಸಮಾನ ಅಂಕಗಳು ಇರುತ್ತವೆ.
5. ಪಕ್ಕದಲ್ಲಿ ಒದಗಿಸಿರುವ ಪ್ರಶ್ನೆಪತ್ರಿಕೆಯ ಚೌಕದಲ್ಲೇ ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಪ್ರಶ್ನೆಪತ್ರಿಕೆಯಲ್ಲಿ ಬೇರೆ ಏನನ್ನೂ ಬರೆಯಬಾರದು.

**ನೋಂದಣಿ ಸಂಖ್ಯೆ**

6. ಈ ಪ್ರಶ್ನೆಪತ್ರಿಕೆಯು 100 ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಪ್ರತಿಯೊಂದು ಪ್ರಶ್ನೆಯು 4 ಆಯ್ಕೆಗಳನ್ನು ಒಳಗೊಂಡಿರುತ್ತದೆ. ನೀವು ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಗುರುತು ಮಾಡಬೇಕೆನಿಸುವ ಉತ್ತರವನ್ನು ಆಯ್ಕೆ ಮಾಡಿಕೊಳ್ಳಿ. ಒಂದು ವೇಳೆ ಅಲ್ಲಿ ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿವೆಯೆಂದು ನೀವು ಭಾವಿಸಿದರೆ ನಿಮಗೆ ಅತ್ಯುತ್ತಮವೆನಿಸುವ ಉತ್ತರಕ್ಕೆ ಗುರುತು ಮಾಡಿ. ಏನೇ ಆದರೂ ಪ್ರತಿ ಪ್ರಶ್ನೆಗೆ ನೀವು ಕೇವಲ ಒಂದು ಉತ್ತರವನ್ನು ಮಾತ್ರ ಆಯ್ಕೆ ಮಾಡಬೇಕು. ಒಂದು ವೇಳೆ ಒಂದಕ್ಕಿಂತ ಹೆಚ್ಚಿನ ಉತ್ತರಗಳನ್ನು ಎನ್‌ಕೋಡ್ ಮಾಡಿದಲ್ಲಿ ಆ ಉತ್ತರಗಳನ್ನು **ಅಸಿಂಧುವೆಂದು** ಪರಿಗಣಿಸಲಾಗುವುದು.
7. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾಗಿರುವ ಪ್ರತ್ಯೇಕ ಒ.ಎಂ.ಆರ್. ಉತ್ತರ ಹಾಳೆಯ ಮೇಲೆ ಕೇವಲ ಕಪ್ಪು ಅಥವಾ ನೀಲಿ ಶಾಯಿಯ ಬಾಲ್ ಪಾಯಿಂಟ್ ಪೆನ್ನಿನಲ್ಲಿ ಮಾತ್ರ ಗುರುತು ಮಾಡಬೇಕು.
8. **ಅಭ್ಯರ್ಥಿಯು ತಮ್ಮ personalized ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆ ಶ್ರೇಣಿಯು, ನಾಮಿನಲ್ ರೋಲ್‌ನ ತಮ್ಮ ಅಂಕಣದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆ ಶ್ರೇಣಿಯು ಒಂದೇ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ವ್ಯತ್ಯಾಸ ಕಂಡು ಬಂದಲ್ಲಿ ಅಭ್ಯರ್ಥಿಯು ಯಾವ ಶ್ರೇಣಿಯ ಪ್ರಶ್ನೆಪತ್ರಿಕೆಯನ್ನು ಉಪಯೋಗಿಸಿರುತ್ತಾರೆ ಎಂಬುದರ ಬಗ್ಗೆ ಘೋಷಣಾ ಪತ್ರವನ್ನು ನೀಡತಕ್ಕದ್ದು ಇಲ್ಲದಿದ್ದಲ್ಲಿ, ಅಭ್ಯರ್ಥಿಯ ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಶ್ರೇಣಿಯನ್ನೇ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದು.**
9. ಒಂದು ವೇಳೆ ಅಭ್ಯರ್ಥಿಯು ಬೇರೊಬ್ಬ ಅಭ್ಯರ್ಥಿಯ personalized ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಉತ್ತರಿಸಿದ್ದಲ್ಲಿ ಅಂತಹ ಒ.ಎಂ.ಆರ್. ಉತ್ತರ ಹಾಳೆಯನ್ನು **ಅಸಿಂಧುವೆಂದು** ಪರಿಗಣಿಸಲಾಗುವುದು.
10. ಅಭ್ಯರ್ಥಿಯು ಒ.ಎಂ.ಆರ್. ಉತ್ತರ ಹಾಳೆಯಲ್ಲಿ ನಿಗದಿಪಡಿಸಿದ ಸ್ಥಳದಲ್ಲಿ ಸಹಿ ಮಾಡತಕ್ಕದ್ದು. ತಪ್ಪಿದಲ್ಲಿ, ಅಂತಹ ಅಭ್ಯರ್ಥಿಯ ಒ.ಎಂ.ಆರ್. ಉತ್ತರ ಹಾಳೆಯನ್ನು **ಅಸಿಂಧುವೆಂದು** ಪರಿಗಣಿಸಲಾಗುವುದು.
11. ಅಭ್ಯರ್ಥಿಯು Non-personalized ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಉತ್ತರಿಸಿದ್ದಲ್ಲಿ ಅಭ್ಯರ್ಥಿಯು ನೋಂದಣಿ ಸಂಖ್ಯೆಯನ್ನು ಒದಗಿಸಿರುವ ಸ್ಥಳದಲ್ಲಿ ಬರೆದು ಸಂಬಂಧಪಟ್ಟ ವೃತ್ತವನ್ನು ತುಂಬಬೇಕು ಹಾಗೂ ತಮ್ಮ ಪ್ರಶ್ನೆಪತ್ರಿಕೆ ಶ್ರೇಣಿಯನ್ನು ಕಡ್ಡಾಯವಾಗಿ ಬರೆಯಬೇಕು ಮತ್ತು ನಿಗದಿಪಡಿಸಿದ ಸ್ಥಳದಲ್ಲಿ ಸಹಿ ಮಾಡಬೇಕು. ಇಲ್ಲದಿದ್ದಲ್ಲಿ, ಅಂತಹ ಅಭ್ಯರ್ಥಿಯ ಒ.ಎಂ.ಆರ್. ಉತ್ತರ ಹಾಳೆಯನ್ನು **ಅಸಿಂಧುವೆಂದು** ಪರಿಗಣಿಸಲಾಗುವುದು.
12. ನಾಮಿನಲ್ ರೋಲ್ **(ಹಾಜರಾತಿ ಹಾಳೆ)**ನಲ್ಲಿ ಅಭ್ಯರ್ಥಿಯು ತಪ್ಪದೇ ಸಹಿ ಹಾಕತಕ್ಕದ್ದು.
13. ಅಭ್ಯರ್ಥಿಯು **ಮೇಲ್ಕಂಡ** ಯಾವುದೇ ಸೂಚನೆಗಳನ್ನು ಉಲ್ಲಂಘಿಸಿದಲ್ಲಿ ಅಂತಹ ಒ.ಎಂ.ಆರ್. ಉತ್ತರ ಹಾಳೆಯನ್ನು **ಅಸಿಂಧುವೆಂದು** ಪರಿಗಣಿಸಲಾಗುವುದು.
14. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಗಂಟೆ ಬಾರಿಸಿದ ತಕ್ಷಣವೇ ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಇನ್ನಾವುದೇ ಗುರುತು ಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಬಂದು ನಿಮ್ಮಲ್ಲಿರುವ ಒ.ಎಂ.ಆರ್. ಉತ್ತರ ಹಾಳೆಯನ್ನು ತಮ್ಮ ವಶಕ್ಕೆ ಪಡೆದುಕೊಂಡು ಲೆಕ್ಕಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು.
15. ಪರೀಕ್ಷೆ ಮುಗಿದ ನಂತರ ಸಂವೀಕ್ಷಕರಿಂದ ಹಿಂಪಡೆದ ಕಾರ್ಬನ್ ರಹಿತ ಒ.ಎಂ.ಆರ್. ಉತ್ತರ ಹಾಳೆಯ (Candidate copy) ಪ್ರತಿಯನ್ನು ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸುವವರೆಗೆ ಜೋಪಾನವಾಗಿ ಸಂರಕ್ಷಿಸಿಟ್ಟುಕೊಳ್ಳಬೇಕು ಮತ್ತು ಆಯೋಗವು ಯಾವುದೇ ಸಂದರ್ಭದಲ್ಲಿ ಹಾಜರುಪಡಿಸಲು ಸೂಚಿಸಿದ್ದಲ್ಲಿ, ತಪ್ಪದೇ ಅದೇ ಪ್ರತಿಯನ್ನು ಹಾಜರುಪಡಿಸಬೇಕು.
16. ಚಿತ್ತು ಕೆಲಸಕ್ಕಾಗಿ ಹಾಳೆಗಳನ್ನು ಪ್ರಶ್ನೆಪತ್ರಿಕೆಯ ಕೊನೆಯಲ್ಲಿ ಸೇರಿಸಲಾಗಿದೆ. ಪ್ರಶ್ನೆಪತ್ರಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವ ರೀತಿಯ ಗುರುತನ್ನು ಮಾಡತಕ್ಕದ್ದಲ್ಲ.

**ಯಾವುದೇ ರೀತಿಯ ಮೊಬೈಲ್ ಫೋನ್‌ಗಳು, ಸ್ಮಾರ್ಟ್ ವಾಚ್‌ಗಳು, ಕ್ಯಾಲ್‌ಕ್ಯುಲೇಟರ್‌ಗಳನ್ನು ಅಥವಾ ಇತರೆ ಎಲೆಕ್ಟ್ರಾನಿಕ್/ಕಮ್ಯುನಿಕೇಶನ್ ಉಪಕರಣಗಳನ್ನು ಪರೀಕ್ಷಾ ಆವರಣದೊಳಗೆ ತರುವುದನ್ನು ನಿಷೇಧಿಸಿದೆ.**

***Note :*** *English version of the instructions is printed on the back cover of this booklet.*

SEAL

WWW.SHIKARAT.COM

## GENERAL KANNADA PAPER - II

## JUNIOR ASSISTANT/SECOND DIVISION ASSISTANT
## GROUP 'C' POSTS COMPETITIVE EXAMINATION

**Examination held on 19-09-2021 Subject Code: 414 Total marks: 100**
**(2:00 PM 3:30 PM) One mark for each question**
**No Negative Marks**

**KEY CHART**
**Question Booklet Series - 'D'**

| Question Number | Key Answer | Question Number | Key Answer | Question Number | Key Answer | Question Number | Key Answer |
|---|---|---|---|---|---|---|---|
| 1 | 3 | 26 | 1 | 51 | 3 | 76 | 3 |
| 2 | 1 | 27 | 4 | 52 | 2 | 77 | 1 |
| 3 | 1 | 28 | 2 | 53 | 1 | 78 | 2 |
| 4 | 3 | 29 | 3 | 54 | 1 | 79 | 2 |
| 5 | 3 | 30 | 3 | 55 | 3 | 80 | 3 |
| 6 | 4 | 31 | 2 | 56 | 4 | 81 | 1 |
| 7 | 2 | 32 | 1 | 57 | 3 | 82 | 4 |
| 8 | 4 | 33 | 2 | 58 | 1 | 83 | 3 |
| 9 | 3 | 34 | Grace | 59 | 2 | 84 | 1 |
| 10 | 2 | 35 | 4 | 60 | 1 | 85 | 2 |
| 11 | 4 | 36 | 3 | 61 | 3 | 86 | 1 |
| 12 | 2 | 37 | 3 | 62 | 1 | 87 | 3 |
| 13 | 4 | 38 | 3 | 63 | 4 | 88 | 1 |
| 14 | 2 | 39 | 4 | 64 | 3 | 89 | 3 |
| 15 | 1 | 40 | 1 | 65 | 1 | 90 | 4 |
| 16 | 3 | 41 | 4 | 66 | 3 | 91 | 2 |
| 17 | 2 | 42 | 1 | 67 | 2 | 92 | 1 |
| 18 | 1 | 43 | 3 | 68 | 4 | 93 | 1 |
| 19 | 2 | 44 | 4 | 69 | 3 | 94 | 2 |
| 20 | 2 | 45 | 2 | 70 | 1 | 95 | 1 |
| 21 | 3 | 46 | 3 | 71 | 4 | 96 | 3 |
| 22 | 1 | 47 | 1 | 72 | 2 | 97 | 1 |
| 23 | 2 | 48 | 3 | 73 | 3 | 98 | 3 |
| 24 | 4 | 49 | 1 | 74 | 2 | 99 | 3 |
| 25 | 1 | 50 | 4 | 75 | 1 | 100 | 4 |

**sd/-**
**Controller of Examination**
**Karnataka Public Service Commission**
**Bengaluru.**

WWW.SHIKARAT.COM

ಸೂಚನೆ : ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ ಅರ್ಥಗ್ರಹಿಸಿ, ಕೇಳಲಾದ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಗುರುತಿಸಿರಿ. (ಪ್ರಶ್ನೆ ಸಂಖ್ಯೆ 1-4)

ಹದಿನೇಳು ವರುಷಗಳು ಕಳೆದರೂ ಇನ್ನೂ ನಮ್ಮ ಸೀಮಾರೇಖೆ ನಿಶ್ಚಿತ ನೆಲೆಯನ್ನು ಕಂಡಿಲ್ಲ. ತಾಯಿ ಮತ್ತು ತಾಯಿ ನೆಲ ಜೀವನದ ಪರಮ ಮೌಲ್ಯಗಳು. ನನ್ನ ಜೀವಮಾನದ ಕೊನೆಯುಸಿರು ಇರುವವರೆಗೂ ಕನ್ನಡಕ್ಕಾಗಿಯೇ ದುಡಿಯುವೆ, ಕನ್ನಡಕ್ಕಾಗಿಯೇ ಬದುಕುವೆ. ಹತ್ತು–ಇಪ್ಪತ್ತು ವರುಷಗಳ ಕಾಲ ಕನ್ನಡ ನಾಡಿನಲ್ಲಿ ನೆಲೆಯೂರಿರುವ ಸೋದರ–ಸೋದರಿಯರಿಗೆ ಕನ್ನಡ ನುಡಿ ಬಾರದೆ ಹೋದರೆ, ನಮ್ಮ ಔದಾರ್ಯಕ್ಕೆ ಅರ್ಥ ಇರುವುದಿಲ್ಲ. ಯಾವ ಜನಾಂಗದಲ್ಲಿ ತಾನು ಹುಟ್ಟಿದ ಮಣ್ಣಿನ ಬಗ್ಗೆ ಘನವಾದ ಅಭಿಮಾನ ಮತ್ತು ಅದನ್ನು ರಕ್ಷಿಸಿಕೊಳ್ಳುವ ಸಾಮರ್ಥ್ಯವಿರುವುದೇ ಜೀವಂತ ಜನಾಂಗವೆನಿಸುವುದು. ಕಾಲದ ಬದಲಾವಣೆಗೆ ತಕ್ಕಂತೆ ಕನ್ನಡಿಗರು ಹೊಂದಿಕೊಂಡು ಬಂದಿರುವುದು ಸ್ಪಷ್ಟ. ನಮ್ಮ ನಾಡಿನಲ್ಲಿ ಬಂದು ನೆಲೆಸಿದ ಇತರ ರಾಜ್ಯದ ಜನರು ಇದನ್ನು ಸಾಧಿಸಿ ತೋರಿಸಿದ್ದಾರೆಯೇ ಎನ್ನುವುದರ ಆತ್ಮ ನಿರೀಕ್ಷಣೆಯನ್ನು ಮಾಡಿಕೊಳ್ಳಬೇಕು. ಭಾಷಾಪ್ರಾಂತಗಳ ರಥವನ್ನು ಸರಿಯಾದ ದಾರಿಗೆ ತಿರುಗಿಸಿ ಮುನ್ನಡೆಸಬೇಕು. ಯುವಕರ ಕೆರಳಿಕೆ, ಹೋರಾಟ, ಬೌದ್ಧಿಕ ಮತ್ತು ಸಾಂಸ್ಕೃತಿಕ ದಾಸ್ಯವನ್ನು ತೊಲಗಿಸುವಲ್ಲಿ ವಿನಿಯೋಗವಾಗಬೇಕೇ ಹೊರತು, ಜಾತಿಮತ, ದ್ವೇಷಗಳನ್ನು ಬೆಳೆಸಲು ಕಾರಣವಾಗಬಾರದು. ಜನತೆಗೆ ಮೊದಲು ಅನ್ನ, ಅರಿವೆ, ಅಕ್ಷರ, ಆಸರೆ, ಔಷಧ– ಈ ಅವಶ್ಯಕತೆಗಳನ್ನು ಪೂರೈಸುವುದರಲ್ಲಿ ಸಮರ್ಥರಾಗದೆ ದೊಡ್ಡ ದೊಡ್ಡ ಮಾತುಗಳನ್ನಾಡಿ ಕೇವಲ ಸಾಹಿತ್ಯಿಕ ಸಮಸ್ಯೆಗಳನ್ನು ಎದುರಿಸುವುದು ಸಾಧ್ಯವಿಲ್ಲ. ಸಾಹಿತಿಯಾದವರಿಗೆ ಸಾಮಾಜಿಕ ಪ್ರಜ್ಞೆ ಇರಬೇಕು ಭಾಷಾವಾರು ಪ್ರಾಂತಗಳು ರೂಪುಗೊಳ್ಳುತ್ತಿರುವಾಗ, ಮುಂದೆ ಹದಿನೇಳು ವರುಷಗಳಲ್ಲಿ ದುರಂತದ ಅಂಚಿಗೆ ಬಂದು ನಾವು ನಿಂತೇವು ಎನ್ನುವ ಕಲ್ಪನೆ ಕೂಡಾ ನಮಗಿರಲಿಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿದ್ದ ಉದಾತ್ತ ಧ್ಯೇಯಗಳ ತ್ಯಾಗ ಬಲಿದಾನಗಳ ಮನೋಭಾವನೆಗಳು ಇಂದು ಮಾಯವಾಗಿವೆ. ದುಡಿಮೆಯಿಲ್ಲದೆ ಸಂಬಳ ಬಯಸುವುದು, ಅರ್ಹತೆಗಳಿಲ್ಲದೆ ಅಧಿಕಾರಕ್ಕೆ ಹಾತೊರೆಯುವುದು, ಉತ್ತಮರಿಗಿಂತ ಸಲ್ಲದವರಿಗೆ ಪ್ರಾಶಸ್ತ್ಯ ಸಿಗುತ್ತಿರುವ ಈ ಕಾಲದಲ್ಲಿ ಪ್ರಜ್ಞಾವಂತ ಯುವಜನರು ಕೆರಳಿ ನಿಂತರೆ ಆಶ್ಚರ್ಯವಿಲ್ಲ.



WWW.SHIKARAT.COM

1. ಯಾವುದು ಜೀವಂತ ಜನಾಂಗವೆನಿಸಿಕೊಳ್ಳುತ್ತದೆ ಎಂದರೆ

(1) ಕಾಲದ ಬದಲಾವಣೆಗೆ ತಕ್ಕಂತೆ ಕನ್ನಡಿಗರು ಹೊಂದಿಕೊಂಡು ಬಂದಿರುವುದು

(2) ಕನ್ನಡಕ್ಕಾಗಿಯೇ ದುಡಿಯುವೆ, ಕನ್ನಡಕ್ಕಾಗಿಯೇ ಬದುಕುವೆ

(3) ತಾನು ಹುಟ್ಟಿದ ಮಣ್ಣಿನ ಬಗ್ಗೆ ಅಭಿಮಾನ ಮತ್ತು ಅದನ್ನು ರಕ್ಷಿಸಿಕೊಳ್ಳುವ ಸಾಮರ್ಥ್ಯ

(4) ಭಾಷಾ ಪ್ರಾಂತಗಳ ರಥವನ್ನು ಸರಿಯಾದ ದಾರಿಗೆ ತಿರುಗಿಸುವುದು

2. ಯುವಕರನ್ನು ಕುರಿತು ಕಳಕಳಿಯ ವಿನಂತಿ

(1) ಯುವಕರ ಕೆರಳಿಕೆ, ಹೋರಾಟ, ಸಾಂಸ್ಕೃತಿಕ ದಾಸ್ಯವನ್ನು ತೊಲಗಿಸಲು ವಿನಿಯೋಗವಾಗಬೇಕು

(2) ಅರ್ಹತೆಗಳಿಲ್ಲದೆ ಅಧಿಕಾರಕ್ಕೆ ಹಾತೊರೆಯುವುದು

(3) ಪ್ರಜ್ಞಾವಂತ ಯುವಜನರು ಕೆರಳಿ ನಿಲ್ಲುವುದು

(4) ತಾಯಿ ಮತ್ತು ತಾಯಿನೆಲ ಜೀವನದ ಎರಡು ಪರಮ ಮೌಲ್ಯಗಳು

3. ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ?

(a) ಕೊನೆಯುಸಿರು ಇರುವವರೆಗೂ ಕನ್ನಡಕ್ಕಾಗಿ ದುಡಿಯುವೆ

(b) ಕನ್ನಡಿಗರು ಆತ್ಮ ನಿರೀಕ್ಷಣೆಯನ್ನು ಮಾಡಿಕೊಳ್ಳಬೇಕು

(c) ನಮ್ಮ ಸೀಮಾರೇಖೆ ನಿಶ್ಚಿತ ನೆಲೆಯನ್ನು ಕಂಡಿದೆ.

(1) (a) ಮಾತ್ರ

(2) (a) ಮತ್ತು (b) ಮಾತ್ರ

(3) (b) ಮತ್ತು (c) ಮಾತ್ರ

(4) (a) ಮತ್ತು (c) ಮಾತ್ರ

4. ಕನ್ನಡಿಗರ ಔದಾರ್ಯಕ್ಕೆ ಯಾವಾಗ ಅರ್ಥವಿರುವುದಿಲ್ಲ?

(1) ಕನ್ನಡ ನಾಡು–ನುಡಿಯನ್ನು ಕನ್ನಡಿಗರೇ ನಿರ್ಲಕ್ಷಿಸುವುದರಿಂದ

(2) ಮರಾಠಿ, ಗುಜರಾತಿ ಭಾಷೆಗಳನ್ನು ಕಲಿಯುವುದರಿಂದ

(3) ಕನ್ನಡ ನಾಡಿನಲ್ಲಿ ನೆಲೆನಿಂತ ಇತರ ಪ್ರಾಂತಗಳವರಿಗೆ ಕನ್ನಡ ನಾಡ ನುಡಿ ಬಾರದೇ ಹೋದರೆ

(4) ಮೇಲಿನದು ಯಾವುದೂ ಅಲ್ಲ



WWW.SHIKARAT.COM

ಸೂಚನೆ : ಕೆಳಗಿನವುಗಳಲ್ಲಿ ಖಾಲಿ ಇರುವ ಜಾಗಕ್ಕೆ ಸರಿಯಾದ ಉತ್ತರವನ್ನು ಸೂಚಿಸಿರಿ. **(ಪ್ರಶ್ನೆ ಸಂಖ್ಯೆ 5-10)**

5. 'ಕೃತ್' ಎಂಬ ಪ್ರತ್ಯಯವನ್ನು ———— ಗೆ ಸೇರಿಸುತ್ತೇವೆ.

(1) ತದ್ಧಿತಾಂತ

(2) ಧಾತು

(3) ಕೃದಂತ

(4) ಕರ್ತರಿ ಪ್ರಯೋಗ

6. ಒಳ್ಳೆಯ ಮನುಷ್ಯ ಎಂಬ ಪ್ರಯೋಗದಲ್ಲಿ 'ಒಳ್ಳೆಯ' ಎಂಬುದು ————.

(1) ಪ್ರಕಾರವಾಚಕ

(2) ಪರಿಮಾಣವಾಚಕ

(3) ಸಂಖ್ಯಾವಾಚಕ

(4) ಗುಣವಾಚಕ

7. 'ನಿನ್ನ ಕೆಳೆಯಂ ಸುಯೋಧನನಂ ನೋಡದೆ ನುಡಿಯದಪ್ಪಿಕೊಳ್ಳದೆ ಬೆಸನೇ' ಈ ಪದ್ಯ ————ಗೆ ಉದಾಹರಣೆಯಾಗಿದೆ.

(1) ತ್ರಿಪದಿ

(2) ಕಂದ

(3) ಭಾಮಿನಿ

(4) ರಗಳೆ

8. ಈ ಕೆಳಗಿನ ಪದಗಳಲ್ಲಿ ಶುದ್ಧ ಬರಹವಾಗಿರುವುದು ————.

(1) ಶುಭಾಷಯ

(2) ಅದ್ಯಾಪಕ

(3) ಅಥಿತಿ

(4) ಅಭಿನಂದನೆ

9. "ಕದಡಿದ ಸಲಿಲಂ" ಇಲ್ಲಿ 'ಕದಡಿದ' ಎಂಬುದು ———— ವಿಭಕ್ತಿ.

(1) ಚತುರ್ಥಿ

(2) ದ್ವಿತೀಯ

(3) ಷಷ್ಠಿ

(4) ಪಂಚಮಿ

10. ಚತುರ್ಥಿ ವಿಭಕ್ತಿಯು ———— ಕಾರಕ

(1) ಕರ್ತೃಕಾರಕ

(2) ಸಂಪ್ರದಾನಕಾರಕ

(3) ಸಂಬಂಧಕಾರಕ

(4) ಕರ್ಮಕಾರಕ



WWW.SHIKARAT.COM

**Join our Telegram Channel SHIKARAT.COM**
**https://telegram.me/s/shikarat**

**Join our Facebook Page SHIKARAT.COM**
**https://www.facebook.com/shikarat/**

**Join our Instagram SHIKARAT.COM**
**https://www.instagram.com/shikarat_com/**

**Join our Twitter SHIKARAT.COM**
**https://twitter.com/Shikarat_com**

**For more contact us**
**WhatsApp No = 9742928829**
**Email ID= Admin@shikarat.com**

💞 **Sharing is Caring** 💞

😍**If it is helpful Please Share with your friends (WhatsApp and Telegram Group)** 😍

WWW.SHIKARAT.COM

**ಸೂಚನೆ : ಕೆಳಗಿನ ವಾಕ್ಯಗಳಲ್ಲಿ (ಪ್ರಶ್ನೆ ಸಂಖ್ಯೆ 11-15) (1), (2), (3) ಎಂಬ ಗೆರೆ ಎಳೆದ ಭಾಗಗಳಿವೆ. ಈ ಯಾವುದೇ ಭಾಗದಲ್ಲಿ ವ್ಯಾಕರಣ, ಕಾಗುಣಿತ ಅಥವಾ ಚಿಹ್ನೆಗೆ ಸಂಬಂಧಿಸಿದ ದೋಷವಿದ್ದರೆ ಆ ಭಾಗವನ್ನು ಗುರ್ತಿಸಿ. ದೋಷವಿಲ್ಲದಿದ್ದರೆ "ತಪ್ಪಿಲ್ಲ" ಎಂಬ ನಾಲ್ಕನೇ (4) ಭಾಗವನ್ನು ಗುರುತಿಸಿ.**

ಉದಾಹರಣೆ :

ಈ ಜೀವಸೃಷ್ಟಿಗೆ ಪ್ರಕೃತಿ (1) ಕಾರಣವಾದಂತೆ (2) ಜೀವನಾಶಕ್ಕೂ ಪ್ರಕೃತಿ ಕಾರಣವಾಗುತ್ತದೆ. (3) ತಪ್ಪಿಲ್ಲ. (4)

ಇದರ (3) ಭಾಗದಲ್ಲಿ ಪುನರಾವರ್ತನೆಯಾಗಿರುವ ಪ್ರಕೃತಿ ಪದ ತಪ್ಪು ಆದ್ದರಿಂದ (3) ತಪ್ಪೆಂದು ಭಾವಿಸಿ ಗುರುತಿಸಬಹುದು

**11.** ಸಮಗ್ರದೇಶದ (1) ಗುಣಮಟ್ಟ (2) ಉತ್ತಮ ಶಿಕ್ಷಣದಲ್ಲಿದೆ. (3) ತಪ್ಪಿಲ್ಲ. (4)

**12.** ಸಕರಾತ್ಮಕ ಸದ್ಗುಣಗಳನ್ನು (1) ವಿಧ್ಯಾರ್ತಿಗಳು (2) ರೂಢಿಸಿಕೊಳ್ಳಬೇಕು. (3) ತಪ್ಪಿಲ್ಲ. (4)

**13.** ಬರಗಾಲದಿಂದಾಗಿ (1) ಜಲಾಶಯಗಳು (2) ಖಾಲಿಯಾಗಿವೆ. (3) ತಪ್ಪಿಲ್ಲ. (4)

**14.** ಲಾಕ್‌ಡೌನ್‌ನಿಂದಾಗಿ (1) ದೇಸ ಆರ್ತಿಕವಾಗಿ (2) ಸಂಕಷ್ಟದಲ್ಲಿದೆ. (3) ತಪ್ಪಿಲ್ಲ. (4)

**15.** ಬ್ರಷ್ಟಚಾರ (1) ಅಭಿವೃದ್ಧಿಗೆ (2) ಹಿನ್ನಡೆಯಾಗಿದೆ. (3) ತಪ್ಪಿಲ್ಲ (4)

**ಸೂಚನೆ : ಮುಂದಿನ ವಾಕ್ಯಗಳಲ್ಲಿ (ಪ್ರಶ್ನೆ ಸಂಖ್ಯೆ 16-20) ಪದಗಳು ಕ್ರಮಬದ್ಧವಾಗಿಲ್ಲ. ಅವು ಅರ್ಥಪೂರ್ಣವಾಗುವಂತೆ ಗೆರೆ ಎಳೆದು ಸೂಚಿಸಿದ ಭಾಗಗಳನ್ನು ಪುನಃ ಜೋಡಿಸಿ. ಅವುಗಳ ಅನುಕ್ರಮವನ್ನು ಗುರುತಿಸಿರಿ.**

ಉದಾಹರಣೆ :

ನೋಡಿ (P) ದುರುಗುಟ್ಟಿ (Q) ಸುಟ್ಟುರಿಯುವಂತೆ (R) ದೌಡಾಯಿಸಿದಳು. (S)

(1) QRPS
(2) RSPQ
(3) RQPS
(4) RPQS

ಇಲ್ಲಿ QRPS ಎಂಬುದು ಸರಿಯಾದ ಕ್ರಮ. ಆದುದರಿಂದ ಇಲ್ಲಿ (1)ನ್ನು ಗುರುತಿಸಬೇಕು.

**16.** ವಚನಕಾರ (P) ಮೊದಲ (Q) ಜೇಡರದಾಸಿಮಯ್ಯನು (R) ವಚನಯುಗದ (S)

(1) QPSR
(2) RPQS
(3) RSQP
(4) SQRP



WWW.SHIKARAT.COM

17. ಸಂಬಂಧವಿರಲಾರದು (P) ಪರಸ್ಪರ (Q)

ಅಂತರಂಗದ ಸ್ವಭಾವಕ್ಕೂ (R) ಹೊರನೋಟಕ್ಕೆ (S)

(1) RSPQ
(2) SRQP
(3) SRPQ
(4) PQRS

18. ಫ.ಗು. ಹಳಕಟ್ಟಿಯವರು (P) ವಚನಶಾಸ್ತ್ರದ (Q)

ಪಿತಾಮಹರೆಂದು (R) ಖ್ಯಾತರಾದವರು (S)

(1) PQRS
(2) RSPQ
(3) PSQR
(4) QRPS

19. ಪ್ರತಿಯೊಂದು ಅಂಗುಲದಲ್ಲಿಯೂ (P)

ಕನ್ನಡಿಗನಾಗಬೇಕು (Q) ಕನ್ನಡಿಗನೂ (R) ಪ್ರತಿಯೊಬ್ಬ (S)

(1) SPRQ
(2) SRPQ
(3) RPSQ
(4) QSPR

20. ನಮ್ಮೆಲ್ಲರ ಜವಾಬ್ದಾರಿ (P) ಸಂಪನ್ಮೂಲಗಳನ್ನು ಕಾಪಾಡುವುದು (Q)

ಮುಂದಿನ ಪೀಳಿಗೆಗೆ (R) ನೈಸರ್ಗಿಕ (S)

(1) RSPQ
(2) RSQP
(3) QRSP
(4) PRSQ

**ಸೂಚನೆ : ಈ ಕೆಳಗೆ ಕೊಡಲಾದ ಆರು ವಾಕ್ಯಗಳುಳ್ಳ–ಭಾಗಗಳಲ್ಲಿ ಒಂದು ಮತ್ತು ಆರನೇ ವಾಕ್ಯಗಳು ಸರಿಯಾದ ರೀತಿಯಲ್ಲಿವೆ. ನಡುವಿನ ನಾಲ್ಕು ವಾಕ್ಯಗಳು P, Q, R, ಮತ್ತು S ಜಾಗ ಬದಲಾಯಿಸಿವೆ. ಅವುಗಳನ್ನು ಅರ್ಥ ಬರುವಂತೆ ಸರಿಯಾಗಿ ಹೊಂದಿಸಿ ಉತ್ತರ ಯಾವುದು ಎಂಬುದನ್ನು ಗುರುತಿಸಬೇಕು. (ಪ್ರಶ್ನೆ ಸಂಖ್ಯೆ 21-25)**

ಉದಾಹರಣೆ :

1. 1893 ರಲ್ಲಿ ಒಮ್ಮೆ ಸ್ವಾಮಿ ವಿವೇಕಾನಂದರು ಪ್ಯಾರಿಸ್‌ನಿಂದ ಗ್ರಾಮವೊಂದಕ್ಕೆ ಹೊರಟಿದ್ದರು.

P. ಕುದುರೆ ಗಾಡಿಯ ಚಾಲಕ, ಕೆಳಗಿಳಿದು ತಮ್ಮ ಮಕ್ಕಳನ್ನು ಮುದ್ದಾಡಿ ಮುಂದೆ ಸಾಗುತ್ತಾನೆ.

Q. ಹಿಂದೆ ಮುಳುಗಿಹೋಗಿದ್ದ ಬ್ಯಾಂಕನ್ನು ಕಟ್ಟಿ ಮತ್ತು ಮಾಲಿಕನಾಗುವ ಹಿರಿಯಾಸೆ ಚಾಲಕನಿಗಿತ್ತು.

R. ಈಗ ಸಂಸಾರ ಸಾಗಿಸಲು, ಸಾಲ ತೀರಿಸಲು ಚಾಲಕ ವೃತ್ತಿಯನ್ನು ಅವಲಂಬಿಸಿದ್ದ.

S. ಚಾಲಕನ ಪೂರ್ವ ಚರಿತ್ರೆ ಕೇಳಿದ ವಿವೇಕಾನಂದರು ಅತೀವ ಆನಂದಪಟ್ಟು.

6. ಈ ವ್ಯಕ್ತಿ ಒಬ್ಬ ವ್ಯವಹಾರಿಕ ವೇದಾಂತಿ ಎಂದು ಮೆಚ್ಚಿಕೊಂಡರು ಕೆಳಕ್ಕೆ ಉರುಳಿದರೂ ಸನ್ನಿವೇಶಕ್ಕೆ ಬಲಿಯಾಗಬಾರದು ಅಲ್ಲವೆ?

(1) PQRS
(2) QPSR
(3) RQSP
(4) SPRQ

ಈ ಉದಾಹರಣೆಯಲ್ಲಿ PQRS ಎಂಬುದು ಸರಿಯಾದ ವಾಕ್ಯ ಹೊಂದಾಣಿಕೆ ಕ್ರಮವಾಗಿದೆ. ಆದ್ದರಿಂದ ಇಲ್ಲಿ (1) ಅನ್ನು ಗುರುತಿಸಬೇಕು.



WWW.SHIKARAT.COM

21. 1. ರಾವಣನು ಸೀತೆಯನ್ನು ಕೊನೆಯದಾಗಿ ಭೇಟಿಯಾದ ಸನ್ನಿವೇಶ

P. ಸೀತೆ ಅತ್ಯಂತ ದುಃಖಿತಳಾಗಿ ರಾಮನ ಆಯಸ್ಸು, ಪ್ರಾಣ ಯುದ್ಧ ಭೂಮಿಯಲ್ಲಿ ಇರುವವರೆಗೆ ಬರಬೇಡ ಎನ್ನುತ್ತಾಳೆ.

Q. ಸೀತೆಯ ಸಮೀಪದಲ್ಲಿದ್ದ ರಾಕ್ಷಸ ಕನ್ಯೆಯರು ರಾವಣನ ಸೌಂದರ್ಯವನ್ನು ತಿಳಿಸುತ್ತಾರೆ.

R. ರಾವಣನು ಅತ್ಯಂತ ಸಂತೋಷಭರಿತನಾಗಿ ಸೀತೆಯನ್ನು ಕಾಣಲು ಬರುತ್ತಾನೆ

S. ಸೀತೆಯ ಬಳಿ ಬಂದ ರಾವಣನು ನಿನ್ನ ರಾಮನನ್ನು ಬಿಟ್ಟು ನನ್ನ ಸಾಮ್ರಾಜ್ಯದ ಸುಖವನ್ನು ಅನುಭವಿಸು ಎನ್ನುತ್ತಾನೆ.

6. ಇಲ್ಲಿ ಸೀತೆಯ ಪತಿಭಕ್ತಿ ಹಾಗೂ ರಾಮನ ಶಕ್ತಿಯ ಬಗ್ಗೆ ಇರುವ ನಂಬಿಕೆ ವ್ಯಕ್ತವಾಗುತ್ತದೆ.

(1) PSRQ
(2) SPQR
(3) RQSP
(4) SRQP

22. 1. ರಾಧಾಕೃಷ್ಣನ್ ಅಪ್ರತಿಮ ದೇಶಭಕ್ತ ಶಿಕ್ಷಣ ತಜ್ಞರ ಮಹತ್ವದ ಕ್ಷಣಗಳು

P. ಸ್ನಾತಕೋತ್ತರ ಪದವಿಯಲ್ಲಿ ಮಂಡಿಸಿದ 'ದಿ ಎಥಿಕ್ಸ್ ಆಫ್ ವೇದಾಂತ' ಅವರ ಬದುಕಿನ ದಿಕ್ಕನ್ನೇ ಬದಲಾಯಿಸಿತು.

Q. ರಷ್ಯಾಕ್ಕೆ ಭಾರತದ ರಾಯಭಾರಿಯಾಗಿ ಸ್ಟಾಲಿನ್ ನಂತಹ ಮೇಧಾವಿಗಳ ಸರಿಸಮವಾಗಿ ನಿಲ್ಲುವ ವ್ಯಕ್ತಿತ್ವ ಬೆಳೆಸಿಕೊಂಡರು.

R. ಉಪರಾಷ್ಟ್ರಪತಿಯಾಗಿದ್ದಾಗಲೇ ಅವರಿಗೆ ಸರ್ಕಾರ 'ಭಾರತರತ್ನ ಪ್ರಶಸ್ತಿ' ನೀಡಿ ಗೌರವಿಸಿತು.

S. ರಾಷ್ಟ್ರಪತಿಯಾಗಿ ದೇಶದ ಸರ್ವತೋಮುಖ ಏಳಿಗೆಗೆ ಅವಿರತ ಶ್ರಮಿಸಿದರು.

6. ರಾಧಾಕೃಷ್ಣನ್‌ರವರ ಉನ್ನತಿಯ ಹೆಜ್ಜೆಗಳ ಸ್ಮರಣೆ.

(1) PQRS
(2) QRSP
(3) SPQR
(4) RSQP



WWW.SHIKARAT.COM

23\. 1. ಜಾತಿಪದ್ಧತಿ ಅನಿಷ್ಟ ಎಂಬುದನ್ನು ನಮ್ಮ ಕವಿ ಪರಂಪರೆ ಖಂಡಿಸಿದೆ.

P. 'ಕುಲಕುಲವೆಂದು ಏಕೆ ಹೊಡೆದಾಡುವಿರಿ ನಿಮ್ಮ ಕುಲದ ನೆಲೆಯೇನಾದರು ಬಲ್ಲಿರಾ' ಎಂದಿದ್ದಾರೆ ಕನಕದಾಸರು.

Q. ಆದಿಕವಿ ಪಂಪನು 'ಮನುಷ್ಯ ಜಾತಿ ತಾನೊಂದೇ ವಲಂ'

R. ಜಾತಿ ವಿಜಾತಿಯೆನ ಬೇಡ ದೇವನೊಲಿದಾತನೇ ಜಾತ ಸರ್ವಜ್ಞ.

S. ರಗಳೆಯ ಕವಿ ಹರಿಹರ 'ದೇವನೊಲಿದವನ ಕುಲವೆ ಸತ್ಕುಲಂ' ಎಂದಿದ್ದಾನೆ.

6. 'ಮಾನವ ಜಾತಿ' ಒಂದೇ ಎಂಬ ಭಾವನೆ ವ್ಯಕ್ತವಾಗಿದೆ.

(1) PQRS

(2) QSPR

(3) SPRQ

(4) QPRS

24\. 1. ಆಧುನಿಕ ಕನ್ನಡ ಸಾಹಿತ್ಯ ಪರಂಪರೆ ವಿಭಿನ್ನ ಆಶಯಗಳೊಂದಿಗೆ ಬೆಳೆದಿದೆ.

P. ದಲಿತ ಬಂಡಾಯ ಸಾಹಿತ್ಯದಲ್ಲಿ ಪಟ್ಟಭದ್ರ ಹಿತಾಸಕ್ತಿ ವ್ಯವಸ್ಥೆಯ ವಿರುದ್ಧ ಧ್ವನಿಯಾದರು.

Q. ಯುರೋಪ್ ಸಾಹಿತ್ಯ ಪ್ರಭಾವದಿಂದ ನೈಜ ಬದುಕು ಸಂಕೇತಗಳ ಮೂಲಕ ರಚನೆ.

R. ಸ್ವಾತಂತ್ರ್ಯ ಹೋರಾಟವನ್ನು ದೃಷ್ಟಿಯಲ್ಲಿಟ್ಟುಕೊಂಡು ನೊಂದವರ, ಕಾರ್ಮಿಕರ ಪರ ಸಾಹಿತ್ಯ ಬರೆದರು.

S. ಪ್ರಕೃತಿಯನ್ನು ಆರಾಧಿಸುತ್ತಾ, ರಮ್ಯವಾದ ಭಾವಗೀತೆಗಳನ್ನು, ಪ್ರೀತಿ, ಪ್ರೇಮದ ಬದುಕನ್ನು ರಚಿಸಿದರು.

6. ಸಾಹಿತ್ಯ ನಿಂತ ನೀರಲ್ಲ, ಅದು ಕ್ರಿಯಾಶೀಲತೆಯಿಂದ ಕೂಡಿದೆ ಎಂಬುದು ವ್ಯಕ್ತವಾಗುತ್ತದೆ.

(1) RPSQ

(2) PQRS

(3) QPRS

(4) SRQP



WWW.SHIKARAT.COM

25. 1. ರಾಷ್ಟ್ರಕವಿ ಕುವೆಂಪುರವರ ಜೀವನದ ಮತ್ತು ಸಾಹಿತ್ಯದ ಮೈಲಿಗಲ್ಲುಗಳು

P. ಶಿವಮೊಗ್ಗದಲ್ಲಿ ಕುವೆಂಪು ಗೌರವಾರ್ಥವಾಗಿ ಕುವೆಂಪು ವಿಶ್ವವಿದ್ಯಾಲಯ ತೆರೆಯಲಾಯಿತು.

Q. ಪ್ರೌಢಶಾಲಾ ಶಿಕ್ಷಣದಿಂದ ಸ್ನಾತಕೋತ್ತರ ಪದವಿಯವರೆಗೂ ಮೈಸೂರಿನಲ್ಲಿ ಓದಿದರು

R. ಧಾರವಾಢದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

S. ಕನ್ನಡ ಸಾಹಿತ್ಯಕ್ಕೆ ಕುವೆಂಪುರವರ 'ಶ್ರೀರಾಮಾಯಣ ದರ್ಶನಂ' ಕಾವ್ಯಕ್ಕೆ ಜ್ಞಾನಪೀಠ ಪ್ರಶಸ್ತಿ ಪ್ರಥಮವಾಗಿ ಲಭಿಸಿದೆ.

6. ಕುವೆಂಪುರವರ ದೈತ್ಯ ಪ್ರತಿಭೆಯಿಂದ ಕನ್ನಡ ಸಾಹಿತ್ಯಕ್ಕೆ ಗೌರವ ಬಂದಿದೆ

(1) QRSP

(2) PQRS

(3) SRPQ

(4) RPSQ

**ಸೂಚನೆ : ಕೆಳಗೆ ಕೊಡಲಾದ ಒಗಟುಗಳನ್ನು ಬಿಡಿಸಿ ಉತ್ತರ ಗುರುತಿಸಿರಿ. (ಪ್ರಶ್ನೆ ಸಂಖ್ಯೆ 26-28).**

26. ಅವ ಹೆಣ್ಣಿಂದ ಕೆಟ್ಟ, ಇವ ಮಣ್ಣಿಂದ ಕೆಟ್ಟ. ಯಾರು ಈ ಪುರಾಣ ಪುರುಷರು?

(1) ರಾವಣ–ದುರ್ಯೋಧನ

(2) ರಾಮ–ರಾವಣ

(3) ದುಶ್ಶಾಸನ–ಕರ್ಣ

(4) ರಾವಣ–ಲಕ್ಷ್ಮಣ

27. ಹಸಿರು ಸೀರೆ ಉಟ್ಟಾಕೆ, ಬಂಗಾರದ ಗೆಜ್ಜೆ ತೊಟ್ಟಾಕೆ, ನೆಲದಲ್ಲಿ ಮೊಟ್ಟೆ ಇಟ್ಟಾಕೆ ಯಾರು?

(1) ಕಡಲೆ

(2) ಗಜ್ಜರಿ

(3) ಕೋಳಿ

(4) ನೆಲಗಡಲೆ

28. ನೋಡಿದವ ಸುಮ್ಮನಿದ್ದರೂ, ಕೇಳಿದವ ಸುಮ್ಮನಿದ್ದರೂ, ಮಧ್ಯದವನು ಸುಮ್ಮನಿರಲಾರ ಯಾರು?

(1) ಮೂಗು

(2) ಬಾಯಿ

(3) ಹಲ್ಲು

(4) ಕೈ



WWW.SHIKARAT.COM

**ಸೂಚನೆ : ಕೆಳಗಿನ ಪ್ರಶ್ನೆಗಳನ್ನು ಓದಿ ಉತ್ತರವನ್ನು ಗುರುತಿಸಿರಿ. (ಪ್ರಶ್ನೆ ಸಂಖ್ಯೆ 29-32)**

**29.** 'ಚಾಗ' ಪದದ ತದ್ಭವ ರೂಪವೇನು?

(1) ಯೋಗ

(2) ಬೋಗ

(3) ತ್ಯಾಗ

(4) ಯಾಗ

**30.** ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಯಾದ ವರ್ಷ

(1) 1906

(2) 1912

(3) 1915

(4) 1917

**31.** 'ರಾಮಧಾನ್ಯ ಚರಿತೆ' ಯಲ್ಲಿ ಯಾವುದರ ನಡುವೆ ಜಗಳವಾಯಿತು?

(1) ನವಣೆ–ಗೋಧಿ

(2) ರಾಗಿ–ಭತ್ತ

(3) ಜೋಳ–ಸಜ್ಜೆ

(4) ಹಸು–ಹುಲಿ

**32.** ತತ್ವಪದಕಾರ ಶಿಶುನಾಳ ಶರೀಫರ ಗುರು ಯಾರು?

(1) ಗೋವಿಂದ್ ಭಟ್

(2) ರಮಾಕಾಂತ ಭಟ್

(3) ಫಕೀರೇಶ್ವರರು

(4) ಶಿಶುನಾಳದೀಶ

**ಸೂಚನೆ : ಇಂಗ್ಲೀಷ್ ಶಬ್ದಕ್ಕೆ ಸಮಾನಾರ್ಥಕವಾದ ಕನ್ನಡ ಪದವನ್ನು ಗುರುತಿಸಿ. (33-37)**

**33.** ಸ್ವಾತಂತ್ರ್ಯಾನಂತರದಲ್ಲಿ ಭಾರತದ ಆರ್ಥಿಕ ಕ್ಷೇತ್ರದಲ್ಲಿ ಸಾಧನೆ 'ರಿಮಾರ್ಕಬಲ್' ಆಗಿದೆ.

(1) ಕಳಪೆಯಾದದ್ದು

(2) ಗುರುತರವಾದುದು

(3) ಚರ್ಚಾಸ್ಪದವಾದುದು

(4) ತಟಸ್ಥವಾದುದು

**34.** ಸಾಲ ಪಡೆಯಲು ಖಾತೆದಾರರ ಸಹಿಗಳ 'ಸ್ಪೆಸಿಮನ್' ಗಳನ್ನು ಕೇಳುತ್ತಾರೆ.

(1) ನಕಲು

(2) ವಿಶೇಷ

(3) ವರಾದರಿ

(4) ಗಿಡಗಳ



WWW.SHIKARAT.COM

35. ವಿಧಾನ ಸಭೆಯಲ್ಲಿ ನಿಗದಿತ ವಿಷಯಕ್ಕೆ ಸಂಬಂಧಿಸಿದಂತೆ 'ಬಿಲ್' ಅನ್ನು ಮಂಡಿಸಲಾಗುತ್ತದೆ.

(1) ಕಾನೂನು

(2) ಅನುಸೂಚನೆ

(3) ಅಧಿಸೂಚನೆ

(4) ಮಸೂದೆ

36. ಬಿ.ಎಲ್. ರೈಸ್ 'ಎಪಿಗ್ರಫಿ' ಯಲ್ಲಿ ಪರಿಣಿತರಾಗಿದ್ದರು.

(1) ನಾಣ್ಯಗಳ ಅಧ್ಯಯನ

(2) ಸಸ್ಯಗಳ ಅಧ್ಯಯನ

(3) ಶಾಸನಗಳ ಅಧ್ಯಯನ

(4) ತಳಿಗಳ ಅಧ್ಯಯನ

37. ಆಡಳಿತದಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ಸಾಮಾನ್ಯವಾಗಿ 'ಕಮೀಷನರ್' ಇರುತ್ತಾರೆ.

(1) ಅಧೀಕ್ಷಕರು

(2) ಅಭಿಯಂತರರು

(3) ಆಯುಕ್ತರು

(4) ಅಭಿಯೋಜಕರು

**ಸೂಚನೆ : ಈ ಕೆಳಗಿನ ಪದಗಳಲ್ಲಿ ಗುಂಪಿಗೆ ಸೇರದ ಪದವನ್ನು ಗುರುತಿಸಿ. (ಪ್ರಶ್ನೆ ಸಂಖ್ಯೆ 38-40)**

38. (1) ಪಂಚಾಸ್ಯ

(2) ಕೇಸರಿ

(3) ವ್ಯಾಘ್ರ

(4) ಸಿಂಹ

39. (1) ಚಂದ್ರಚೂಡ

(2) ಫಾಲನೇತ್ರ

(3) ಶೂಲಧರ

(4) ಚಕ್ರಧರ

40. (1) ಸಖ

(2) ರಿಪು

(3) ವೈರಿ

(4) ಅರಿ

**ಸೂಚನೆ : ಪ್ರಶ್ನೆ ಸಂಖ್ಯೆ 41 ರಿಂದ 50 ವರೆಗಿನ ಪ್ರಶ್ನೆಗಳಿಗೆ ಅರ್ಥ ಬರೆಯಿರಿ.**

41. ಕೃಕವಾಕು

(1) ಆಮೆ

(2) ಮೊಲ

(3) ಮೊಸಳೆ

(4) ಕೋಳಿ

42. 'ಘರ್ಮಜಲ'

(1) ಬೆವರು

(2) ಕಣ್ಣೀರು

(3) ಇಬ್ಬನಿ

(4) ಅಂತರ್ಜಲ



WWW.SHIKARAT.COM

43. ಕೈಪರೆ – ಎಂದರೆ

(1) ಕಳಚು

(2) ಕೈಗಾಯ

(3) ಚಪ್ಪಾಳೆ

(4) ಹೊಗಳಿಕೆ

44. ಪೀಯೂಷ ಪದದ ಅರ್ಥ

(1) ಜೇನು

(2) ಬೆಣ್ಣೆ

(3) ವಿಷ

(4) ಅಮೃತ

45. ವೈಜಯಂತಿ ಪದದ ಅರ್ಥ

(1) ಜನ್ಮದಿನ

(2) ಬಾವುಟ

(3) ಉತ್ಸವ

(4) ಜಾಗರಣೆ

46. 'ಚರಮ' ಎಂದರೆ

(1) ಕನ್ನಡಕ

(2) ತೊಗಲು

(3) ಕೊನೆಯ

(4) ಸನ್ಯಾಸಿ

47. 'ಕಾಸಾರ' ಪದದ ಅರ್ಥ

(1) ಸರೋವರ

(2) ಕಾಸಿನ ಸರ

(3) ಪರ್ವತ

(4) ಕೈಲಾಸ

48. ಜೀಮೂತ

(1) ಗಂಧರ್ವ

(2) ಸೇವಕ

(3) ಮೋಡ

(4) ನಿಸರ್ಗ



WWW.SHIKARAT.COM

49. ಬಂಡುಣಿ ಪದದ ಅರ್ಥ

(1) ದುಂಬಿ

(2) ಝೇಂಕಾರ

(3) ಹೂವು

(4) ಮಧು

50. ಚಳಿಗದಿರ – ಎಂದರೆ

(1) ಸೂರ್ಯ

(2) ಶಿವ

(3) ಕಾಮನಬಿಲ್ಲು

(4) ಚಂದ್ರ

51. 'ಮಯೂಖ' ಇದರ ಸಮಾನಾರ್ಥಕಗಳು

(1) ನವಿಲು, ಸೋಗೆ

(2) ಕಾಡು, ಅರಣ್ಯ

(3) ಕಾಂತಿ, ಕಿರಣ

(4) ಶಶಿ, ತಿಂಗಳು

52. ಕೆನ್ನೀರ್ ಪದದ ಸಮನಾರ್ಥಕಗಳು

(1) ಸಮುದ್ರ, ಸಾಗರ

(2) ನೆತ್ತರು, ರಕ್ತ

(3) ಹಿನ್ನೀರು, ನಿಂತನೀರು

(4) ಕಣ್ಣೀರು, ಅಶ್ರುಜಲ

53. 'ಕಿತ್ತಡಿ' ಪದದ ಸಮನಾರ್ಥಕಗಳು

(1) ಮುನಿ, ಯತಿ

(2) ಕಿತ್ತಳೆ, ಮೂಸಂಬಿ

(3) ಗುಡಿಸಲು, ಜೋಪಡಿ

(4) ಕಾಲಡಿ, ಪಾದದೂಳಿ

54. ಕನ್ನಡವಕ್ಕಿ – ಪದದ ಸಮನಾರ್ಥಕಗಳು

(1) ಗಿಳಿ, ಕೀರ

(2) ಕೋಗಿಲೆ, ಪಿಕ

(3) ವಾಯಸ, ಕಾಗೆ

(4) ಗರುಡ, ಹದ್ದು

WWW.SHIKARAT.COM



WWW.SHIKARAT.COM

ಸೂಚನೆ : ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗವನ್ನು ತುಂಬಲು ನಾಲ್ಕು ಉತ್ತರ ನೀಡಿದೆ. ಅವುಗಳಲ್ಲಿ ಸೂಕ್ತವಾದುದನ್ನು ಗುರುತಿಸಿ. (ಪ್ರಶ್ನೆ ಸಂಖ್ಯೆ 55-59)

ಉದಾಹರಣೆ : "ಖೇಚರರು" ಪದದ ಅರ್ಥ

(1) ಪ್ರಾಣಿಗಳು

(2) ಮನುಷ್ಯರು

(3) ರಾಕ್ಷಸರು

(4) ಗಂಧರ್ವರು

ಇಲ್ಲಿ "ರಾಕ್ಷಸರು" ಎಂಬುದು "ಖೇಚರರು" ಪದದ ಅರ್ಥವಾದುದರಿಂದ (3) ನ್ನು ಗುರುತಿಸಬೇಕು.

55. "ಅವನಿ" ಪದದ ಅರ್ಥ

(1) ಅವನ

(2) ಅವಳ

(3) ಭೂಮಿ

(4) ಪಟ್ಟಣ

56. "ಅರ್ತಿ" ಪದದ ಅರ್ಥ

(1) ಆರತಿ

(2) ಅತಿಥಿ

(3) ಸ್ನೇಹ

(4) ಪ್ರೀತಿ

57. "ನನ್ನಿ" ಪದದ ಅರ್ಥ

(1) ಅವನ

(2) ನನ್ನ

(3) ಸತ್ಯ

(4) ಸುಳ್ಳು

58. "ಅಂಘ್ರಿ" ಪದದ ಅರ್ಥ

(1) ಪಾದ

(2) ಋಷಿ

(3) ಮುನಿ

(4) ಮುಖ

59. "ಜೋಳವಾಳಿ" ಪದದ ಅರ್ಥ

(1) ಜೋಳ ಕೊಡು

(2) ಅನ್ನದ ಋಣ

(3) ಜೋಳದ ಆಳು

(4) ಜೋಳದ ಬೆಳೆ

ಸೂಚನೆ : ಕೆಳಗೆ ಕೊಟ್ಟಿರುವ ನಾಲ್ಕು ಪದಗಳಲ್ಲಿ ಸಮಾನವಾದ ಅಂಶವಿರುವ ಮೂರು ಪದಗಳಿವೆ. ಭಿನ್ನವಾಗಿ ಉಳಿದಿರುವ ಪದವನ್ನು ಗುರುತಿಸಿ. (ಪ್ರಶ್ನೆ ಸಂಖ್ಯೆ 60-64)

ಉದಾಹರಣೆ : (1) ಭೂಮಿ (2) ಇಳೆ (3) ಕಾನನ (4) ಧರಿತ್ರಿ ಇವುಗಳಲ್ಲಿ (1), (2), (4) ಸಮಾನವಾದ ಪದಗಳಾಗಿದ್ದು, ಕಾನನ ಭಿನ್ನರೂಪವಾಗಿದ್ದು (3) ನ್ನು ಗುರುತಿಸಬೇಕು.

60. (1) ಸುಧಾಕರ

(2) ಶಿವ

(3) ಗಿರಿಜೇಶ್

(4) ಗೌರೀಶ

61. (1) ಕಣ್ಣು

(2) ನೇತ್ರ

(3) ಅಯನ

(4) ಅಕ್ಷಿ



WWW.SHIKARAT.COM

62. (1) ತರಳ
(2) ಹುಡುಗಿ
(3) ಬಾಲಕಿ
(4) ಕಿಶೋರಿ

63. (1) ಪಾದ
(2) ಚರಣ
(3) ಅಡಿ
(4) ಕೆಳಗೆ

64. (1) ಆನೆ
(2) ಗಜ
(3) ಹಸ್ತ
(4) ಕರಿ

**ಸೂಚನೆ : ಕೆಳಗೆ ಕೊಟ್ಟಿರುವ ನಾಲ್ಕು ಪದಗಳಲ್ಲಿ ಒಂದು ಮಾತ್ರ ಅಚ್ಚ ಕನ್ನಡ ಪದ. ಉಳಿದ ಮೂರು ಅನ್ಯಭಾಷಾ ಪದಗಳು. ಕನ್ನಡ ಪದವನ್ನು ಗುರ್ತಿಸಿ. (ಪ್ರಶ್ನೆ ಸಂಖ್ಯೆ 65-68)**

ಉದಾಹರಣೆ :

(1) ಕಾಗದ
(2) ಚುನಾವಣೆ
(3) ಆಕಳು
(4) ಅಸಲಿ

ಇಲ್ಲಿ 'ಆಕಳು' ಎಂಬುದು ಅಚ್ಚ ಕನ್ನಡ ಪದ ಆದುದರಿಂದ (3) ರನ್ನು ಗುರುತಿಸಬೇಕು.

65. (1) ಮನೆ
(2) ಗ್ರಾಮ
(3) ರೈತ
(4) ಜಮೀನು

66. (1) ರಸ್ತೆ
(2) ಸಾಬೂನು
(3) ಗದ್ದೆ
(4) ಆಟ

67. (1) ಕಾನೂನು
(2) ನೇಸರು
(3) ತಕರಾರು
(4) ಸಿನೆಮಾ

68. (1) ಅಡಚಣೆ
(2) ದಿನಾಂಕ
(3) ಮೇಜು
(4) ಕಮ್ಮಗೆ

**ಸೂಚನೆ : ಈ ಕೆಳಗೆ ಕೆಲವು ಕನ್ನಡದ ನುಡಿಗಟ್ಟುಗಳನ್ನು ಅವುಗಳ ಮುಂದೆ ನಾಲ್ಕು ಪರ್ಯಾಯ ರೂಪಗಳನ್ನು ನೀಡಿದೆ ನುಡಿಗಟ್ಟಿನ ಅರ್ಥವನ್ನು ವಿವರಿಸುವ ರೂಪವನ್ನು ಆಯ್ಕೆಮಾಡಿ ಗುರುತಿಸಿ.(ಪ್ರಶ್ನೆ ಸಂಖ್ಯೆ 69-72)**

ಉದಾಹರಣೆ : 'ಬೆವರು ಸುರಿಸು'

(1) ಬಿಸಿಲಲ್ಲಿ ನಿಲ್ಲು
(2) ಬಿಸಿಲು ಹೆಚ್ಚು
(3) ಕಷ್ಟ ಪಡು
(4) ಉಪ್ಪು ನೀರು

ಇಲ್ಲಿ 'ಕಷ್ಟಪಡು' ಸರಿಯಾದ ಅರ್ಥ (3)ನ್ನು ಗುರುತಿಸಬೇಕು

69. 'ಅಂಗೈ ನೆಲ್ಲಿಕಾಯಿ'
(1) ಹತ್ತಿರದಲ್ಲೇ ಇರುವುದು
(2) ಕೈಯಲ್ಲೇ ನೆಲ್ಲಿಕಾಯಿ
(3) ಚನ್ನಾಗಿ ತಿಳಿದಿರು
(4) ಅಗಲವಾದ ಕಾಯಿ



WWW.SHIKARAT.COM

70. 'ಕನ್ನಡಿಯೊಳಗಣಗಂಟು'

(1) ಅಲಭ್ಯವಾದುದು

(2) ಪ್ರತಿಬಿಂಬ

(3) ಕಾಣುವ ಗಂಟು

(4) ಬೆಲೆ ಬಾಳುವುದು

71. ಎತ್ತಿದವರ ಕೈ ಗೂಸು

(1) ಮಗುವನ್ನು ಎತ್ತುವುದು

(2) ಹೆತ್ತವರ ಮಗು

(3) ಅವರದೇ ಕೂಸು

(4) ಸ್ವಂತ ಬುದ್ಧಿಯಿಲ್ಲದವ

72. 'ನಖಶಿಖಾಂತ'

(1) ಉಗುರಷ್ಟು

(2) ಸಂಪೂರ್ಣ

(3) ಎಳ್ಳಷ್ಟು

(4) ಶಿರಸ್ಸಿನಷ್ಟು

**ಸೂಚನೆ : ಕೆಳಗೆ ಕೊಟ್ಟಿರುವ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಗುರ್ತಿಸಿ. (ಪ್ರಶ್ನೆ ಸಂಖ್ಯೆ 73-78)**

ಉದಾಹರಣೆ : ಸುಶ್ರಾವ್ಯ

(1) ಸುಮಧುರ

(2) ಕೆಟ್ಟದಾದ

(3) ಕರ್ಕಶ

(4) ಆಲಿಸು

ಇಲ್ಲಿ (3) ಕರ್ಕಶ ಸರಿಯಾದ ಉತ್ತರ ಆದ್ದರಿಂದ (3) ನ್ನು ಗುರ್ತಿಸಿ.

73. ಊರ್ಧ್ವಮುಖ

(1) ನೇರವಾದ ಮುಖ

(2) ಅರಳಿದ ಮುಖ

(3) ಅಧೋಮುಖ

(4) ಊದಿ ಕೊಂಡ ಮುಖ

74. ಸಮಷ್ಠಿ

(1) ಸಮೂಹ

(2) ವೆಷ್ಠಿ

(3) ಗುಂಪು

(4) ಪೂರ್ಣ

75. ಪ್ರಾಚೀನ

(1) ಅರ್ವಾಚೀನ

(2) ಪುರಾತನ

(3) ನಿರಂಜನ

(4) ಹಳೆಯ

76. ಉದ್ದ

(1) ಕುಳ್ಳ

(2) ಮೋಟ

(3) ಅಗಲ

(4) ಎತ್ತರ

77. ಆದರ

(1) ಅನಾದರ

(2) ಉದ್ಧಾರ

(3) ಉದರ

(4) ಉರಗ

78. ಪಂಡಿತ

(1) ಪಡಿತರ

(2) ಪಾಮರ

(3) ಜ್ಞಾನಿ

(4) ಪಾಂಡಿತ್ಯ


WWW.SHIKARAT.COM

**ಸೂಚನೆ : ಕೆಳಗಿನ ಪದಗಳಿಗೆ ಅವುಗಳ ಮುಂದೆ ಸೂಚಿಸಿದ ಪರ್ಯಾಯ ರೂಪಗಳನ್ನು ಸಮಾನಾರ್ಥಕವಾದ ಅಥವಾ ಅತಿ ಸಮೀಪದ ಅರ್ಥವುಳ್ಳ ರೂಪಗಳನ್ನು ಗುರ್ತಿಸಿ. (ಪ್ರಶ್ನೆ ಸಂಖ್ಯೆ 79-83)**

ಉದಾಹರಣೆ : ಕರಿ

(1) ಕಪ್ಪಾದ

(2) ಕೈ

(3) ಆನೆ

(4) ಬೆಟ್ಟ

ಇಲ್ಲಿ ಆನೆ ಎಂಬುದು ಸರಿಯಾದ ಉತ್ತರ ಆದ್ದರಿಂದ (3)ನ್ನು ಗುರ್ತಿಸಿ.

79. 'ಶಾಲೀವನ' ಪದದ ಸಮಾನಾರ್ಥಕ ಪದ

(1) ಕಾಡು

(2) ಭತ್ತದ ಗದ್ದೆ

(3) ವನಮಾಲಿನಿ

(4) ಉದ್ಯಾನವನ

80. 'ಶೌರಿ' ಪದದ ಸಮಾನಾರ್ಥಕ ಪದ

(1) ಕ್ಷೌರಿಕ

(2) ಕಿಂಕರ

(3) ಕೃಷ್ಣ

(4) ವಿಪ್ರ

81. 'ದೃಗುಜಲ' ಪದದ ಸಮಾನಾರ್ಥಕ ಪದ

(1) ಕಣ್ಣೀರು

(2) ತಣ್ಣೀರು

(3) ಪನ್ನೀರು

(4) ಮೃಗಜಲ

82. 'ಶುಕ' ಪದದ ಸಮಾನಾರ್ಥಕ ಪದ

(1) ಶುಭ

(2) ನಾಯಿ

(3) ಶೋಣ

(4) ಗಿಳಿ

83. 'ಅಗಡು' ಪದದ ಸಮಾನಾರ್ಥಕ ಪದ

(1) ಹಡಗು

(2) ಗುಪ್ತ

(3) ಶೌರ್ಯ

(4) ಸೊಗಡು

**ಸೂಚನೆ : ಕೆಳಗಿನ ಪದಗಳನ್ನು ಬಿಡಿಸಿ ಬರೆದಿದೆ. ಅವುಗಳಲ್ಲಿ ಸರಿಯಾದುದನ್ನು ಗುರುತಿಸಿರಿ. (ಪ್ರಶ್ನೆ ಸಂಖ್ಯೆ 84-89)**

84. 'ಐಕ್ಯಕ' ಪದ ಬಿಡಿಸಿ ಬರೆದರೆ

(1) ಏಕ + ಏಕ

(2) ಏಕ + ಯಾಕೆ

(3) ಏಕ + ಐಕ್ಯ

(4) ಐಕ್ಯೆ + ಕ

85. 'ಕಣ್ಮಲರ್' ಪದ ಬಿಡಿಸಿ ಬರೆದರೆ

(1) ಕಣ್ಣು + ಮಲರ್

(2) ಕಣ್ + ಮಲರ್

(3) ಕಣ್ಣು + ಅಲರ್

(4) ಕಣ್ಣು + ಅರಳು



WWW.SHIKARAT.COM

86. 'ಲೋಕಾಧಿಪತಿ' ಪದ ಬಿಡಿಸಿ ಬರೆದರೆ

(1) ಲ್ಶೋಕ + ಅಧಿಪತಿ

(2) ಲೋಕದ + ಪತಿ

(3) ಲೋಕಾ + ಧಿಪತಿ

(4) ಲೋಕಾ + ಆದಿಪತಿ

87. 'ಮಹೋನ್ನತಿ' ಪದ ಬಿಡಿಸಿ ಬರೆಯಿರಿ

(1) ಮಹಾ + ಹುನ್ನತಿ

(2) ಮಹಾ + ಒನ್ನತಿ

(3) ಮಹಾ + ಉನ್ನತಿ

(4) ಮಹೋ + ಎನ್ನತಿ

88. 'ಸೋಮಾಮೃತ' ಪದ ಬಿಡಿಸಿ ಬರೆದರೆ

(1) ಸೋಮ + ಅಮೃತ

(2) ಸೋಮಾ + ಅಮೃತ

(3) ಸೋಮಾ + ಮೃತ

(4) ಸೋಮ + ಆವೃತ

89. 'ಹಾಸ್ಯಾಸ್ಪದ' ಪದ ಬಿಡಿಸಿ ಬರೆದರೆ

(1) ಹಾಸ್ಯಾ + ಆಸ್ಪದ

(2) ಹಾಸ್ಯೆಯ + ಆಪದ

(3) ಹಾಸ್ಯ + ಆಸ್ಪದ

(4) ಹಾಸ್ಯಾ + ಆಸ್ಪದ

**ಸೂಚನೆ : ಮುಂದೆ ಕೊಡಲಾದ ನಾಲ್ಕು ರೂಪಗಳಲ್ಲಿ ಸರಿಯಾದುದನ್ನು ಗುರುತಿಸಿರಿ. (ಪ್ರಶ್ನೆ ಸಂಖ್ಯೆ 90-95)**

ಉದಾಹರಣೆ : ಅಚಾತುರ್ಯ

(1) ಆಚಾತುರ್ಯ

(2) ಅಚುರ್ತಯ

(3) ಅಚಾತುರ್ಯ

(4) ಅಚಾತ್ರುಯ

ಇಲ್ಲಿ 'ಅಚಾತುರ್ಯ' ಸರಿಯಾದ ಉತ್ತರ. ಆದ್ದರಿಂದ (3)ನ್ನು ಗುರುತಿಸಬೇಕು.

90. (1) ನಿಷೇದರ್ಥಕ
(2) ನಿಸೇದಾರ್ಥಕ
(3) ನಿಷೇದವರ್ತಕ
(4) ನಿಷೇದಾರ್ಥಕ

91. (1) ಗ್ರುಹಸ್ಥಾಶ್ರಮ
(2) ಗೃಹಸ್ಥಾಶ್ರಮ
(3) ಗ್ಯೃಹಸ್ಥಾಶ್ರಮ
(4) ಗ್ರಹಸ್ಥಾಶ್ರಮ

92. (1) ಸರ್ವಜ್ಞ
(2) ಸರ್ವಯಜ್ಞ
(3) ಸರ್ವಜ್ನ
(4) ಸರ್ವಜ್ಞಾ

93. (1) ಈಶಾವಾಸ್ಯಂ
(2) ಈಶಾವಾಶ್ಯಂ
(3) ಇಶಾವಾಸ್ಯಂ
(4) ಈಸಾವಾಸ್ಯಂ



WWW.SHIKARAT.COM

94. (1) ಅಮೃತಸಿಂದು
(2) ಅಮೃತಸಿಂಧು
(3) ಅಮೃಥಸಿಂಧು
(4) ಆಮೃತಸಿಂದು

95. (1) ಕರ್ಮಣಿಪ್ರಯೋಗ
(2) ಕರ್ಮಣಿಪಯೋಗ
(3) ಕರಿಮಣಿಪ್ರಯೋಗ
(4) ಕರ್ಮಣಿಪ್ರಯಾಗ

**ಸೂಚನೆ : ಕೆಳಗಿನ ವಾಕ್ಯಗಳಲ್ಲಿ (ಪ್ರಶ್ನೆ ಸಂಖ್ಯೆ 96-100) ಗೆರೆ ಎಳೆಯಲಾದ ಪದಗಳಲ್ಲಿ ದೋಷವಿದ್ದರೆ ಅದನ್ನು ಸರಿಪಡಿಸಲು ಮುಂದೆ ಪರ್ಯಾಯ ನಾಲ್ಕು ರೂಪಗಳಲ್ಲಿ ಸೂಕ್ತವಾದುದನ್ನು ಗುರುತಿಸಿ. ದೋಷವಿಲ್ಲದಿದ್ದರೆ ಸುಧಾರಣೆ ಬೇಕಿಲ್ಲ. ಆಗ (4)ನ್ನು ಗುರುತಿಸಿ.**

ಉದಾಹರಣೆ : ಮಕ್ಕಳು ಸಂಗೀತವನ್ನು ಸುಶ್ರಾವ್ಯವಾಗಿ ಆಡಿದರು.

(1) ಹಾಡಿದರು
(2) ಆಲಿಸಿದರು
(3) ಆಡಿಸಿದರು
(4) ಅಲಿಸಿದರು

ಇಲ್ಲಿ "ಆಡಿದರು" ಎಂಬುದು ದೋಷವಾಗಿದ್ದು "ಹಾಡಿದರು" ಎಂದಿರಬೇಕು. ಆದ್ದರಿಂದ (1)ನ್ನು ಗುರುತಿಸಬೇಕು.

96. ರಂ.ಶ್ರೀ ಮುಗಳಿ "ಕನ್ನಡ ಸಾಹಿತ್ಯ ಚರಿತ" ಗ್ರಂಥ ಬರೆದಿದ್ದಾರೆ.
(1) ಕನ್ನಡ ಸಾಹಿತ್ಯ ಚರಿತ್ರ
(2) ಕನ್ನಡ ಸಹಿತ ಚರಿತೆ
(3) ಕನ್ನಡ ಸಾಹಿತ್ಯ ಚರಿತ್ರೆ
(4) ಸುಧಾರಣೆ ಬೇಕಿಲ್ಲ

97. ಕನ್ನಡ ಸಾಹಿತ್ಯ "ಸಮ್ಮೈಲನ" ಶೀಘ್ರದಲ್ಲಿ ನಡೆಯಲಿದೆ.
(1) ಸಮ್ಮೇಳನ
(2) ಸಮ್ಮಿಲನ
(3) ಸಮೇಳನ
(4) ಸುಧಾರಣೆ ಬೇಕಿಲ್ಲ

98. ನಾಡಿನಲ್ಲಿ 'ಆವಿಭಕ್ತ' ಕುಟುಂಬಗಳು ಉಳಿಯಬೇಕು.
(1) ವಿಭಕ್ತ
(2) ಆ ವಿಭಕ್ತ
(3) ಅವಿಭಕ್ತ
(4) ಸುಧಾರಣೆ ಬೇಕಿಲ್ಲ

99. ವಿಜಯನಗರ 'ಸಾಮ್ರಾಜ' ವೈಭವದಿಂದ ಮೆರೆಯಿತು.
(1) ಸಮ್ರಾಜ್ಯ
(2) ಸಾಮ್ರಾಟ
(3) ಸಾಮ್ರಾಜ್ಯ
(4) ಸುಧಾರಣೆ ಬೇಕಿಲ್ಲ

100. ನಿಮ್ಮ ಆತ್ಮೀಯರ ಹುಟ್ಟುಹಬ್ಬಕ್ಕೆ "ಶುಭಾಶಯ" ಕೋರಬೇಕು.
(1) ಶುಭಾಸಯ
(2) ಶುಭಾಷಯ
(3) ಶುಬಾಶಯ
(4) ಸುಧಾರಣೆ ಬೇಕಿಲ್ಲ



WWW.SHIKARAT.COM